# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 646 |
| ಸದಸ್ಯರು ಹೆಸರು | : | ಶ್ರೀ ಅ.ದೇವೇಗೌಡ(ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 20.02.2024 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ವಿಶ್ವ ವಿಖ್ಯಾತ ಲಾಲ್ ಬಾಗ್ ಹಾಗೂ ಕಬ್ಬನ್ ಉದ್ಯಾನವನಗಳನ್ನು ತೋಟಗಾರಿಕೆ ಇಲಾಖೆಯಿಂದ ನಿರ್ವಹಣೆ ಮಾಡಲಾಗುತ್ತಿದೆಯೇ: ಮಾಡುತ್ತಿದ್ದಲ್ಲಿ, ಈ ಉದ್ಯಾನವನಗಳ ನಿರ್ವಹಣೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: | ಹೌದು,<br><br>ಲಾಲ್ ಬಾಗ್ ಸಸ್ಯತೋಟ ಮತ್ತು ಕಬ್ಬನ್ ಉದ್ಯಾನವನದ ನಿರ್ವಹಣೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಕೆಳಕಂಡತಿವೆ:<br>**I. ಲಾಲ್ ಬಾಗ್ ಸಸ್ಯತೋಟ:**<br><br>1. ಲಾಲ್ ಬಾಗ್ ಸಸ್ಯಶಾಸ್ತ್ರೀಯ ತೋಟದಲ್ಲಿ ಇಲಾಖೆಯ ನುರಿತ ತೋಟಗಾರರಿಂದ ಕಾಲ-ಕಾಲಕ್ಕೆ ಉದ್ಯಾನವನದ ನಿರ್ವಹಣಾ ಕಾರ್ಯವನ್ನು ಕೈಗೊಳ್ಳುತ್ತಿದ್ದು, ಮುಂಗಾರಿನಲ್ಲಿ ಸಸ್ಯೋತ್ಪಾದನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ.<br>2. ಉದ್ಯಾನವನದಲ್ಲಿನ ಟೋಪಿಯರಿ ಉದ್ಯಾನವನದಲ್ಲಿರುವ ವಿವಿಧ ಆಕೃತಿಗಳಿಗೆ ಪರಿಣಿತಿ ಹೊಂದಿದ ತೋಟಗಾರರಿಂದ ಸೂಕ್ತ ಆಕಾರ ನೀಡಿ ನಿರ್ವಹಿಸಲಾಗುತ್ತಿದೆ.<br>3. ಉದ್ಯಾನವನದಲ್ಲಿರುವ ಮರಗಿಡಗಳಿಗೆ ತೇವಾಂಶವನ್ನು ಕಾಪಾಡಲು ಸಹಾಯಕವಾಗುವಂತೆ ಎಲೆಗಳಿಂದ ಮಲ್ಚಿಂಗ್ ಅನ್ನು ಮಾಡಲಾಗುತ್ತಿದೆ.<br>4. ಉದ್ಯಾನವನದಲ್ಲಿ ವಿವಿಧ ಸ್ಥಳಗಳಲ್ಲಿರುವ ಹೆಡ್ಜ್ ಗಳನ್ನು ಅಲಂಕಾರಿಕವಾಗಿ ಆಗಿಂದ್ದಾಗೆ ಪ್ರೂನ್ ಮಾಡಲಾಗುತ್ತಿದೆ.<br>5. ದೇಶ-ವಿದೇಶಗಳಿಂದ ವಿವಿಧ ಬಗೆಯ ಅಪರೂಪದ ಗಿಡ ಮರಗಳನ್ನು ಲಾಲ್ ಬಾಗ್ ಗೆ ಪರಿಚಯಿಸಲು ಒತ್ತು ನೀಡುತ್ತಿದ್ದು, ಇವುಗಳ ಪೋಷಣೆಯನ್ನು ಕಾಲ-ಕಾಲಕ್ಕೆ ತಾಂತ್ರಿಕವಾಗಿ ನಿರ್ವಹಿಸಲಾಗುತ್ತಿದೆ.<br>6. ಪಶ್ಚಿಮ ಘಟ್ಟದ ಸಾಲಿನ ವಿವಿಧ ವಿಶೇಷವಾದ 264 ಆಯ್ದ ಸಸ್ಯ ಪ್ರಬೇಧಗಳನ್ನು ಲಾಲ್ ಬಾಗ್ ಗೆ ಹೊಸದಾಗಿ ಪರಿಚಯಿಸಲಾಗಿದೆ.<br>7. ಲಾಲ್ ಬಾಗ್ ಸಸ್ಯಶಾಸ್ತ್ರೀಯ ತೋಟದಲ್ಲಿ ಸ್ವಚ್ಛತಾ ಸಿಬ್ಬಂದಿಯವರಿಂದ ಪ್ರತಿನಿತ್ಯ ಉದ್ಯಾನವನದಲ್ಲಿ ಉದುರುವ ಎಲೆ, ರೆಂಬೆ ಕೊಂಬೆಗಳು ಹಾಗೂ ಇತರೆ ತ್ಯಾಜ್ಯಗಳನ್ನು ಕಾಲ-ಕಾಲಕ್ಕೆ ಹೊರಸಾಗಿಸಿ ಸದಾ ಲಾಲ್ ಬಾಗ್ ಸ್ವಚ್ಛವಾಗಿರುವಂತೆ ಕರ್ತವ್ಯ ನಿರ್ವಹಿಸಲಾಗುತ್ತಿದೆ.<br>8. ಲಾಲ್ ಬಾಗ್ ಸಸ್ಯಶಾಸ್ತ್ರೀಯ ತೋಟದಲ್ಲಿ ಪ್ರತಿ ದಿನ ಮೂರು ಪಾಳಿಯಲ್ಲಿ ಅವಶ್ಯ ಭದ್ರತಾ ಸಿಬ್ಬಂದಿಗಳು |

| | | |
|---|---|---|
| | | ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರತಿದಿನ ಉದ್ಯಾನವನಕ್ಕೆ ಭೇಟಿ ನೀಡುವ ಸಾರ್ವಜನಿಕರು, ವಾಯುವಿಹಾರಿಗಳು, ಪರಿಸರ ಪ್ರಿಯರು ಹಾಗೂ ಪ್ರವಾಸಿಗರು ಪ್ಲಾಸ್ಟಿಕ್ ಅನ್ನು ಸಸ್ಯತೋಟದಲ್ಲಿ ಬಳಸದಂತೆ, ಲಾಲ್ ಬಾಗ್ ನ ಅಮೂಲ್ಯ ಸಸ್ಯ ಪ್ರಭೇದಗಳಿಗೆ ಹಾನಿ ಮಾಡದಂತೆ ಎಲ್ಲಾ ಮುನ್ನೆಚ್ಚರಿಕಾ ಸುರಕ್ಷತಾ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ.<br>9. ಸಸ್ಯತೋಟಲ್ಲಿ ನೀರು ಮತ್ತು ವಿದ್ಯುತ್ ನಿರ್ವಹಣಾ ಕಾರ್ಯವನ್ನು ಕಾಲಕಾಲಕ್ಕೆ ಕೈಗೊಳ್ಳಲಾಗುತ್ತಿದೆ.<br>10. BWSSBಯ ಶುದ್ದೀಕರಿಸಿದ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ನೀರನ್ನು ಪಡೆದು ಸ್ಪ್ರಿಂಕ್ಲರ್ ಮುಖೇನ ಲಾಲ್ ಬಾಗ್ ನ ಹುಲ್ಲು ಹಾಸುಗಳಿಗೆ ನೀರನ್ನು ಹಾಯಿಸಿ, ಸಸ್ಯ ಸಂಪತ್ತನ್ನು ಸಂರಕ್ಷಿಸಲಾಗುತ್ತಿದೆ.<br><br>**II. <u>ಕಬ್ಬನ್ ಉದ್ಯಾನವನ:</u>**<br>1. ಕಬ್ಬನ್ ಉದ್ಯಾನವನದ ನಿರ್ವಹಣೆಗೆ ಸಂಬಂಧಿಸಿದಂತೆ ಸ್ವಚ್ಛತೆಗಾಗಿ ಅವಶ್ಯ ಸ್ವಚ್ಛತಾ ಸಿಬ್ಬಂದಿಗಳನ್ನು ನಿಯೋಜಿಸಿ ಕಾಲ-ಕಾಲಕ್ಕೆ ಸ್ವಚ್ಛತಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.<br>2. ಉದ್ಯಾನವನದ ಭದ್ರತೆಗಾಗಿ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಿ ಎಲ್ಲಾ ರೀತಿಯ ಸೂಕ್ತ ಮುನ್ನೆಚ್ಚರಿಕಾ ಭದ್ರತಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.<br>3. ಕಬ್ಬನ್ ಉದ್ಯಾನವನದ ಸಸ್ಯ ಸಂಪತ್ತಿನ ಸಂರಕ್ಷಣೆಗಾಗಿ ಕಾಲ-ಕಾಲಕ್ಕೆ ಸ್ಪ್ರಿಂಕ್ಲರ್ ಮೂಲಕ ನೀರಿನ ವ್ಯವಸ್ಥೆಯನ್ನು ಕಲ್ಪಿಸಿ ಉದ್ಯಾನವನದ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ.<br>4. ಸೂಕ್ತ ವಿದ್ಯುತ್ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. |
| ಆ | ಕಳೆದ 2 ವರ್ಷಗಳಲ್ಲಿ ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನಗಳು ನಿರ್ವಹಣೆಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು: | **<u>ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನದ ನಿರ್ವಹಣೆಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಇಂತಿವೆ:</u>**<br>**I. <u>ಲಾಲ್ ಬಾಗ್ ಸಸ್ಯತೋಟ :</u>**<br>• 2021-22 ನೇ ಸಾಲಿನಲ್ಲಿ ರೂ.360.00 ಲಕ್ಷಗಳು<br>• 2022-23 ನೇ ಸಾಲಿನಲ್ಲಿ ರೂ. 584.94 ಲಕ್ಷಗಳು<br>• 2023-24 ನೇ ಸಾಲಿನಲ್ಲಿ ರೂ. 330.00 ಲಕ್ಷಗಳು<br>**II. <u>ಕಬ್ಬನ್ ಉದ್ಯಾನವನ :</u>**<br>• 2021-22 ನೇ ಸಾಲು: 350.00 ಲಕ್ಷಗಳು<br>• 2022-23 ನೇ ಸಾಲು: 337.40 ಲಕ್ಷಗಳು<br>• 2023-24 ನೇ ಸಾಲು: 290.00 ಲಕ್ಷಗಳು |
| ಇ | ಕಳೆದ 2 ವರ್ಷಗಳಲ್ಲಿ ಲಾಲ್ ಬಾಗ್ ಮತ್ತು ಕಬ್ಬನ್ ಉದ್ಯಾನವನಗಳ ಅಭಿವೃದ್ಧಿಗಾಗಿ ನಡೆದ ಕಾಮಗಾರಿಗಳ ವಿವರವನ್ನು ನೀಡುವುದು? | **<u>ಲಾಲ್ ಬಾಗ್ ಸಸ್ಯತೋಟ ಮತ್ತು ಕಬ್ಬನ್ ಉದ್ಯಾನವನಗಳ ವ್ಯಾಪ್ತಿಯಲ್ಲಿ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳ ವಿವರಗಳು ಇಂತಿವೆ:</u> (2021-22 ನೇ ಸಾಲಿನಲ್ಲಿ)**<br>**I. <u>ಲಾಲ್ ಬಾಗ್ ಸಸ್ಯತೋಟ:</u>**<br>• Providing and Construction of RCC Rain Water |

| | | |
|---|---|---|
| | | Drain from Director of Horticulture office Entrance to Existing Rain Water Drain in Front M.H.Marigowda Library at Lalbagh Premises<br>Rs. 40,16,000/-<br>2401-00-119-6-03-125<br>(ತೋಟಗಾರಿಕೆ ಕಟ್ಟಡಗಳು) ರಾಜ್ಯವಲಯ ಯೋಜನೆ<br>• Fixing of heavy stone at Lalbagh main gate and supplying and laying of hoskote gravel near lake at lalbagh<br>Rs.98,000/-<br>2401-00-119-6-03-125<br>(ತೋಟಗಾರಿಕೆ ಕಟ್ಟಡಗಳು) ರಾಜ್ಯವಲಯ ಯೋಜನೆ<br>II**) <u>2022-23 ನೇ ಸಾಲಿನಲ್ಲಿ:</u>**<br>• Construction of Size Masonry Drain behind Rose park to Band Stand shade and upto Garden and along the arboretum lawn and main Entrance Gate at Lalbagh Botanical Garden, Benagluru.<br>Rs.90,25,000/-<br>2406-02-112-0-17-139 (ಪ್ರಧಾನ ಕಾಮಗಾರಿ) ಯೋಜನೆ<br>• ಲಾಲ್ ಬಾಗ್ ಸಸ್ಯತೋಟದಲ್ಲಿ ಹಾಲಿ ಇರುವ 300 KVA ವಿದ್ಯುತ್ ಸ್ಥಾವರವನ್ನು 400 KVA ವಿದ್ಯುತ್ ಸ್ಥಾವರಕ್ಕೆ ಹೆಚ್ಚಿಸಲು ವಿದ್ಯುತ್ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br>**II. <u>ಕಬ್ಬನ್ ಉದ್ಯಾನವನ:</u>**<br>2021-22 ನೇ ಸಾಲಿನ ಕಳೆದ ಎರಡು ವರ್ಷಗಳಲ್ಲಿ ಕಬ್ಬನ್ ಉದ್ಯಾನವನದ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಕಾಮಗಾರಿ ಕಾರ್ಯಗಳನ್ನು ಕೈಗೊಂಡಿರುವುದಿಲ್ಲ. ಉದ್ಯಾನವನದ ನಿರ್ವಹಣಾ ಕಾರ್ಯಗಳನ್ನು ಕಾಲ-ಕಾಲಕ್ಕೆ ಕೈಗೊಳ್ಳಲಾಗುತ್ತಿದೆ. |

**NO:HORTI 72 HGM 2024**

**(ಎಸ್.ಎಸ್.ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ ತೋಟಗಾರಿಕೆ ಸಚಿವರು